ಸಿ.ಸಿ .ನಂ. 225/2022 ಪಿಡಬ್ಲೂಃ 1

ದಿನಾಂಕಃ 13-02-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಆರೋಪಿಯ ಪರವಾಗಿಃ ಶ್ರೀ ಪಿ ಎಸ್ ಎನ್ ವಕೀಲರಿಂದಃ**

3. ಎಲ್ಲಾ ಸಹಕಾರಿಗಳಿಗೆ ಇರುವಂತೆ ನಮ್ಮ ಸಹಕಾರಿಗೂ ಕೂಡ ಬೈಲಾ ಇದೆ ಎಂದರೆ ಸರಿ . ನಾನು ನಮ್ಮ ಸಹಕಾರಿಯ ಬೈಲಾ ಓದಿಲ್ಲ . ಕಾರಣ ನಮ್ಮ ಸಹಕಾರಿಯ ನಿಯಮಗಳ ಬಗ್ಗೆ ನನಗೆ ಹೇಳಲು ಆಗುವುದಿಲ್ಲ ಎಂದರೆ ಸರಿ. ನಾನು ಫಿರ್ಯಾದು ಸಹಕಾರಿಗೆ ನೇಮಕಗೊಂಡು ಎರಡು ವರ್ಷಗಳಾಗಿವೆ . ಒಂದು ಸಹಕಾರಿಗೆ ಸೇರಿದ ನಂತರ ಮೊದಲನೇಯದಾಗಿ ಆ ಸಹಕಾರಿಯ ನಿಯಮಾವಳಿಗಳನ್ನು ತಿಳಿದುಕೊಳ್ಳಬೇಕು ಎಂದರೆ ಸರಿಯಲ್ಲ. ನಮ್ಮ ಸಹಕಾರ ಪ್ರಾರಂಭವಾದಾಗಿನಿಂದ ಇಲ್ಲಿಯವರೆಗೆ ಇರುವ ನಿರ್ದೇಶಕರ ಹೆಸರು ನೆನಪಿಲ್ಲ. ಕೆಲವರ ಹೆಸರು ಗೊತ್ತಿದೆ . ಗಾನಶ್ರೀ ನಾಯ್ಕ , ಗಣಪತಿ ನಾಯ್ಕ , ಶರದ ನಾಯ್ಕ ಇವರುಗಳು ನಿರ್ದೇಶಕರಾಗಿರುತ್ತಾರೆ . ಶರದ ನಾಯ್ಕ ಎಂದರೆ ಶರದ ಗಣಪತಿ ನಾಯ್ಕ ಎಂದರೆ ಇರಬಹುದು. ಈಗಲೂ ಕೂಡ ನಮ್ಮ ಸಹಕಾರಿಯಲ್ಲಿ ಈ ಮೂವರು ನಿರ್ದೇಶಕರಾಗಿರುತ್ತಾರೆ . ಇವರನ್ನು ಹೊರತು ಪಡಿಸಿ ಬೇರೆ ನಿರ್ದೇಶಕರ ಹೆಸರು ನೆನಪಿಲ್ಲ . ನಮ್ಮ ಸಹಕಾರಿಯ ಬೈಲಾ ಬಗ್ಗೆಯಾಗಲೀ, ಅದರ ನಿರ್ದೇಶಕರ ಬಗ್ಗೆಯಾಗಲೀ ನನಗೆ ಸರಿಯಾದ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಸಾಲದ ಅರ್ಜಿ ಬಂದಾಗ ಮಂಜೂರು ಮಾಡುವುದು , ತಿರಸ್ಕರಿಸುವುದು ,ನೌಕರರನ್ನು ನೇಮಕ ಮಾಡಿಕೊಳ್ಳುವುದು ನಿರ್ದೇಶಕರ ಕೆಲಸ ಎಂದರೆ ಸರಿ . ನಿರ್ಶದೇಶಕರ ಮಂಡಳಿಯ ಮಿಟಿಂಗ್ ಕರೆದಾಗ ಮಾತ್ರ ಅವರ ಕೆಲಸ ಇರುತ್ತದೆ . ದೈನಂದಿನ ಕಾರ್ಯಗಳಾದ ನಮ್ಮ ಶಾಖೆಯಲ್ಲಿ ಕುಳಿತು ಲೋನ್ ರಿಕವರಿ ಸಾಲ ನೀಡುವುದು ಹಾಗೂ ಇನ್ನಿತರ ಯಾವುದೇ ಕಾರ್ಯಕಗಳಿಗೆ ನಿರ್ದೇಶಕರು ವಭಾಗವಹಿಸುವುದಿಲ್ಲ ಅದೆಕ್ಕೆ ಸಂಬಂಧಪಟ್ಟಂತೆ ಆಯಾ ನೌಕರರು ಇರುತ್ತಾರೆ ಎಂದರೆ ಮಾಹಿತಿ ಇಲ್ಲ. ನಮ್ಮ ಶಾಖೆಯಲ್ಲಿ ಎಲ್ಲದರ ಬಗ್ಗೆ ಮಾಹಿತಿ ಇರುವ ವ್ಯಕ್ತಿ ಎಂದರೆ ಮುಖ್ಯ ಕಾರ್ಯ ನಿರ್ವಾಹಕರು . ನಾನು ಯಾವುದೇ ಮಾಹಿತಿ ಇಲ್ಲ

ಪಿಡಬ್ಲೂಃ 1

ಎಂದು ಸಾಕ್ಷ್ಯ ನುಡಿದಿದ್ದರಿಂದ ಸತ್ಯ ಸಂಗತಿ ಆಚೆಗೆ ಬರುವುದಿಲ್ಲ ಎಂದರೆ ಸರಿಯಲ್ಲ . ನಾವು ಮಾಡಿರುವ ಸುಳ್ಳು ಪ್ರಕರಣದಲ್ಲಿ ನುಸಿಳಿಕೊಳ್ಳುವಕ್ಕೋಸ್ಕರ ಮಾಹಿತಿ ಇಲ್ಲ ಮಾಹಿತಿ ಇಲ್ಲ ಎಂದು ವ್ಯತಿರಿಕ್ತ ಉತ್ತರ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಬೈಲಾ ಪ್ರಕಾರ ಆಡಳಿತ ಮಂಡಳಿಯ ಬೈಲಾ ಪ್ರಕಾರ ಮುಖ್ಯ ನಿರ್ವಾಹಕರು , ಶಾಖಾ ವ್ಯವಸ್ಥಾಪಕರು ಟೈಪಿಸ್ಟ ಕ್ಲರ್ಕ ಹಾಗೂ ಅಟೆಂಡರ ಹಾಗೂ ಕ್ಯಾಶಿಯರ್ ಮಾಡುವ ಎಲ್ಲಾ ಕೆಲಸಗಳನ್ನು ಆಡಳಿತ ಮಂಡಳಿಯ ಸದಸ್ಯರು ನಿರ್ವಹಿಸುತ್ತಾರಾ ಅಥವಾ ಅದಕ್ಕೆ ಬೇರೆ ಬೇರೆ ಸಿಬ್ಬಂದಿಗಳು ಇದ್ದಾರಾ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿದಿರುತ್ತಾರೆ . ಈ ಬಗ್ಗೆ ತಿಳಿದುಕೊಂಡು ಬಂದು ಸಾಕ್ಷ್ಯ ನುಡಿಯಲು ಅಭ್ಯಂತರವಿಲ್ಲ.

(ಈ ಹಂತದಲ್ಲಿ ಆರೋಪಿ ಪರ ವಕೀಲರ ವಿನಂತಿ ಮೇರೆಗೆ ಪಾಟೀ ಸವಾಲು ಮಾಡಲು ಕಾಲಾವಕಾಶ ಕೇಳಿದ್ದು ಪಾಟೀ ಸವಾಲನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.